ಓ.ಎಸ್. ನಂ. 40/2022
ಪಿ.ಡಬ್ಲ್ಯೂ- 1

(ಇಂದು ದಿಃ 01-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**<u>ಪಾಟೀ ಸವಾಲು :- 4 ನೇ ಪ್ರತಿವಾದಿ ಪರ ಶ್ರೀ.ವಿ.ಜೆ.ಎಮ್. ವಕೀಲರಿಂದ :-</u>**

ನಾನು ಸೇಡಂ ನಿವಾಸಿ ಎಂದರೆ ಸರಿ. ಸೇಡಂನದಲ್ಲಿ ನನ್ನ ಕುಟುಂಬದ ಎಲ್ಲಾ ವ್ಯವಹಾರಗಳು ನನಗೆ ಗೊತ್ತು ಎಂದರೆ ಸರಿ. 1 ನೇ ಪ್ರತಿವಾದಿ ಹೈದ್ರಬಾದ ನಿವಾಸಿ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿಗೆ ದಾವಾ ಮನೆಯ ಮುಟೇಷನ ಆಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಯಾವ ದಿನಾಂಕದಂದು ಮಾರಾಟ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಸುಮಾರು 15 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾರೆ. 1 ನೇ ಪ್ರತಿವಾದಿ ಪೂರ್ತಿ ಮನೆ ಮಾರಾಟ ಮಾಡಿಲ್ಲ ಎಂದರೆ ಸರಿ. ಮಾರಾಟ ಮಾಡಿದ ಆಸ್ತಿಯ ವಿಸ್ತೀರ್ಣ ಮತ್ತು ಚೆಕಬಂದಿ ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನ ಅಳತೆ ಉದ್ದ 92 ಅಡಿ, ಅಗಲ 14 ಅಡಿ ಇದೆ. ಅದರ ಚೆಕಬಂದಿ ಪೂರ್ವಕ್ಕೆ ಜಾನಕಿರಾಮನ ಮನೆ, ಪಶ್ಚಿಮಕ್ಕೆ ಭೀಮಣ್ಣನ ಮನೆ. ಉತ್ತರಕ್ಕೆ 7 ನೇ ಪ್ರತಿವಾದಿ. ದಕ್ಷಿಣಕ್ಕೆ ಕಾನಗಡ್ಡಿ ಟ್ರಸ್ಟ ಜಾಗ . ಮೇಲಿನ ಚೆಕಬಂದಿ ನಡುವಿನ ಜಾಗ 90 ಅಡಿ ಉದ್ದ ಇಲ್ಲ ಎಂದರೆ ಸರಿಯಲ್ಲ.

ಹಣಮಯ್ಯ ನನ್ನ ಮುತ್ಯಾ ಎಂದರೆ ಸರಿ. ಸದರಿ ಹಣಮಯ್ಯನಿಗೆ 4 ಜನ ಗಂಡು ಮಕ್ಕಳು, 2 ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳ ಹೆಸರು ಶಾಂತಮ್ಮ ಮತ್ತು ಲಕ್ಷ್ಮಮ್ಮ. ಶಾಂತಮ್ಮ ಮತ್ತು ಲಕ್ಷ್ಮಮ್ಮ ತೀರಿಹೋಗಿದ್ದಾರೆ. ಲಕ್ಷ್ಮಮ್ಮ ರವರ ಮದುವೆಯಾಗಿತ್ತು ಆದರೆ ಅವರಿಗೆ ಮಕ್ಕಳು ಇಲ್ಲ. ಶಾಂತಮ್ಮ ರವರಿಗೆ ಮಕ್ಕಳು ಇವೆ. ಅವರುಗಳ ಹೆಸರು ಈರಪ್ಪ ಮತ್ತು ಸಣ್ಣಈರಪ್ಪ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಹಣಮಯ್ಯನ ಮಗ ಭೀಮಯ್ಯ ತೀರಿಹೋಗಿದ್ದಾರೆ. ಬೀಮಯ್ಯನಿಗೆ ಒಬ್ಬ ಗಂಡು ಮಗ ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾರೆ. ಗಂಡು ಮಗನ ಹೆಸರು ಗುರಪ್ಪ ಮತ್ತು ಹೆಣ್ಣು ಮಗಳ ಹೆಸರು ನಾಗಮ್ಮ. ಗುರಪ್ಪ ಮತ್ತು ನಾಗಮ್ಮ ತೀರಿಹೋಗಿದದಾರೆ. ಗುರಪ್ಪನಿಗೆ ಒಬ್ಬ ಮಗ. ಆತನ ಹೆಸರು ಬಸವರಾಜ. ಆತ ಬದುಕಿದ್ದಾನೆ. ಗುಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳ ಹೆಸರು ಚೆನಮ್ಮ ಮತ್ತು ಕಾಶಮ್ಮ. ಕಾಶಮ್ಮ ಬದುಕಿದ್ದಾರೆ. ಚೆನಮ್ಮ ತೀರಿಹೋಗಿದ್ದಾರೆ. ಅವರಿಗೆ 3 ಜನ ಗಂಡು ಮಕ್ಕಳು ಇದ್ದಾರೆ. ಅವರು ಬದುಕಿದ್ದಾರೆ. ನಾಗಮ್ಮನ ಮಕ್ಕಳನ್ನು ಈ

ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಹಣಮಯ್ಯನ ಮಗ ಅಡಿವೆಪ್ಪ. ಅಡಿವೆಪ್ಪನಿಗೆ 2 ಗಂಡು ಮಕ್ಕಳು. ಹಣಮಯ್ಯನ ಮಗ ರಾಮಚಂದ್ರ ತೀರಿಹೋಗಿದ್ದಾರೆ. ರಮಚಂದ್ರನಿಗೆ ನಾಗಮ್ಮ ಎಂಬ ಮಗಳು ಎಂದರೆ ಸರಿ. ಅವಳು ಬದುಕಿದ್ದಾಳೆ. ಅವಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

4 ನೇ ಪ್ರತಿವಾದಿ ಅರ್ಧ ಮನೆಯಲ್ಲಿ ವಾಸ ಇದ್ದಾರೆ. ಅರ್ಧ ಮನೆ ಎಂದರೆ 4 ರೂಮ್ ಗಳಲ್ಲಿ ವಾಸ ಇದ್ದಾರೆ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಸದರಿ 4 ರೂಮ್ ಮಾತ್ರ ಮಾರಾಟ ಮಾಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸಂಗತಿ ಮಾರಾಟ ಮಾಡುವಾಗ ನನಗೆ ಗೊತ್ತಿತ್ತು. 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಿಃ 09-02-2009 ಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 2009 ರಿಂದ ಈ ದಾವೆ ಸಲ್ಲಿಸುವವರೆಗೆ ಸದರಿ ಕ್ರಯ ಪತ್ರವನ್ನು ನಾನು ಪ್ರಶ್ನೆ ಮಾಡಿ ಯಾವುದೇ ದಾವೆ ಹಾಕಿಲ್ಲ ಎಂದರೆ ಸರಿ . 2009 ಕ್ಕಿಂತ ಈಗ ಮನೆಯ ಮಾರುಕಟ್ಟೆ ಮೌಲ್ಯ ಹೆಚ್ಚಾಗಿರುವ ಕಾರಣ ಹೇಗಾದರು ಮಾಡಿ ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಶ್ರೀ ವಿ.ಜೆ.ಎಮ್. ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟಿ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.